ಊ) ಈ ಶೀರ್ಷಿಕೆ ಹಣದಲ್ಲಿ ನಿರ್ಮಾಣ ಮಾಡಿರುವ ಕೋಣೆಗಳೂ ಒಂದೇ ವರ್ಷ ಮಳೆಗಾಲದಲ್ಲಿ ಬಿದ್ದು ಹೋದರೆ ಈ ಕಳಪೆ ಕೆಲಸಕ್ಕೆ ಜವಾಬ್ದಾರರಾರು; ಇವರ ಮೇಲೆ ಕೈಗೊಂಡಿರುವ ಕ್ರಮವೇನು;

ಋ) ಈ ಬಿದ್ದು ಹೋಗಿರುವ ಶಾಲೆಯ ಕೋಣೆಗಳನ್ನು ಪುನಃ ನಿರ್ಮಾಣ ಮಾಡಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಮಾಡಿಕೊಡಬಹುದೇ ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಹೌದು.

ಆ) ಈ ಶಾಲೆಯ ಕಟ್ಟಡವು 1986-87ನೇ ಸಾಲಿನ ಎಸ್‌ಆರ್‌ಇಪಿ (ಯೋಜನೆಯಡಿಯಲ್ಲಿ) ಶೀರ್ಷಿಕೆ ಹಣದಲ್ಲಿ ಕಟ್ಟಲಾಗಿದೆ.

ಇ. ಈ ಶೀರ್ಷಿಕೆಯ ಹಣದಲ್ಲಿ ಸೇಡಂ ತಾಲ್ಲೂಕಿನಲ್ಲಿ ಒಟ್ಟು 11 ಶಾಲಾ ಕೋಣೆಗಳನ್ನು ನಿರ್ಮಿಸಲಾಗಿದೆ.

ಈ) 3.85 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಗ್ರಾಮವಾರು ವಿವರ ಈ ಕೆಳಕಂಡಂತೆ ಇದೆ:-

1.	ಹಾಬಾಳ (ಟಿ)	2 ಕೋಣೆಗಳು
2.	ಮುಸ್ಪಳ್ಳಿ	1 ಕೋಣೆ
3.	ಯಡಗಾ	1 "
4.	ತರವಳ್ಳಿ	1 "
5.	ಗೌಡನಳ್ಳಿ	1 "
6.	ಹೊಳಗೋಳ	1 "
7.	ಯಡ್ಡಳ್ಳಿ	1 "
8.	ತೋಟ್ಟಳ್ಳಿ	1 "
9.	ಮದರಾ ನಾಗಳಪಳ್ಳಿ	1 "
10.	ಬೆಟಗೇರಾ (ಕೆ)	1 "

ಉ) ತರವಳ್ಳಿ ಹಾಗೂ ಮದರಾ ನಾಗಳಪಳ್ಳಿ ಹೊರತಾಗಿ ಉಳಿದ ಗ್ರಾಮಗಳ ಶಾಲಾ ಕೋಣೆಗಳು ಸುಸ್ಥಿತಿಯಲ್ಲಿರುತ್ತವೆ.

ಊ) ವಿಪರೀತ ಮಳೆಯಿಂದಾಗಿ ಬಿದ್ದು ಹೋದ ಕಾರಣ ಇದಕ್ಕೆ ಪ್ರಕೃತಿ ವಿಕೋಪವೇ ಕಾರಣವಾದ್ದರಿಂದ ಹೊಣೆಗಾರಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಈ ತಾಲ್ಲೂಕು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ವ್ಯಾಪ್ತಿಯಲ್ಲಿ ಬರುವುದರಿಂದ ಬಿದ್ದು ಹೋಗಿರುವ ಶಾಲೆಗಳ ಕೋಣೆಗಳನ್ನು ನಿರ್ಮಾಣ ಮಾಡಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲು ಪರಿಶೀಲಿಸಲಾಗುವುದು.

ಮರಾಠಿ ಶಾಲೆಗಳಲ್ಲಿ ಕೊಠಡಿಗಳ ಕೊರತೆ

1022 (1798): ಶ್ರೀ ಬಿ.ಐ. ಪಾಟೀಲ (ಉಚ್ಚಾಂಗವ್):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಳಗಾಂ ತಾಲ್ಲೂಕು ಹಾಗೂ ನಗರದಲ್ಲಿನ ಮರಾಠಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಕೊಠಡಿ ಅನುಪಾತ ಎಷ್ಟು;

2. ಹಾಲಿ ಇರುವ ಕೊಠಡಿಗಳು ವಿದ್ಯಾರ್ಥಿ ವೃಂದಕ್ಕೆ ಅನುಗುಣವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

3. ಹಾಗಿದ್ದಲ್ಲಿ ಸರ್ಕಾರ ಹೆಚ್ಚಿನ ಮರಾಠಿ ಶಾಲೆಗಳಲ್ಲಿನ ಕೊಠಡಿಗಳ ನಿರ್ಮಾಣಕ್ಕೆ ಏನು ಕ್ರಮ ತೆಗೆದುಕೊಂಡಿದೆ ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1.	ಬೆಳಗಾಂ ನಗರ	45:1
	ಬೆಳಗಾಂ ಜಿಲ್ಲೆ	58:1

2. ಬಂದಿದೆ.

3. ಬೆಳಗಾಂ ತಾಲ್ಲೂಕಿನಲ್ಲಿ ಕೊಠಡಿಗಳ ಕೊರತೆಯಿಂದ ಮರಾಠಿ ಶಾಲೆಗಳ ನಿರ್ಮಾಣಕ್ಕೆ ಬೆಳಗಾಂ ಜಿಲ್ಲಾಪರಿಷತ್‌ರವರನ್ನು ಕೋರಲಾಗಿದೆ.

ರಾಜ್ಯದಲ್ಲಿ ಜಿಡ್ಡಿನ ಅಂಶವಿರುವ ಹಾಲನ್ನು ಕೊಂಡುಕೊಳ್ಳುತ್ತಿರುವ ದರದ ಬಗ್ಗೆ

1023 (863): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):--

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಷ್ಟ್ರದ ಯಾವ ಯಾವ ರಾಜ್ಯದಲ್ಲಿ 3.5 ಜಿಡ್ಡಿನ ಅಂಶವಿರುವ ಹಾಲನ್ನು ಯಾವ ದರದಲ್ಲಿ ಡೇರಿಗಳು ಕೊಂಡುಕೊಳ್ಳುತ್ತಿವೆ; (ವಿವರ ಕೊಡಿ);

ಆ) ರೈತರಿಂದ ಕೊಂಡುಕೊಳ್ಳುವ ಹಾಲಿನ ದರಕ್ಕೂ ಸಾರ್ವಜನಿಕರಿಗೆ ನೀಡುವ ದರಕ್ಕೂ ಅಂತರವಿರಲು ಕಾರಣವೇನು;

ಇ) ಹಾಲು ಉತ್ಪಾದಿಸುವ ರೈತರ ಆರ್ಥಿಕ ದೃಷ್ಟಿಯಿಂದ ಸರ್ಕಾರ ನಿಗದಿ ಮಾಡಿರುವ ಹಾಲಿನ ದರವನ್ನು ಹೆಚ್ಚಿಸಲು ಆಲೋಚಿಸಿದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) ರಾಜ್ಯದ ಹೆಸರು	ಶೇ. 3.5 ಜಿಡ್ಡಿರುವ ಪ್ರತಿ ಲೀಟರ್‌ನ ಕೊಳ್ಳುವ ದರ
1. ಆಂಧ್ರಪ್ರದೇಶ	ರೂ. 5.05
2. ಗುಜರಾತ್	ರೂ. 4.97
3. ಹರಿಯಾಣ	ರೂ. 4.52
4. ಕೇರಳ	ರೂ. 6.08
5. ಮಧ್ಯಪ್ರದೇಶ	ರೂ. 5.13